**ಓ.ಎಸ್.ನಂಃ 52/2020**

**ಡಿಡಬ್ಲ್ಯೂ-2: ಅಂಕಯ್ಯ**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 23.03.2026 ರಂದು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಒಂದನೇ ಪ್ರತಿವಾದಿ ಪರ ವಕೀಲರಿಂದಃ**

ಸರ್ವೇ ನಂಃ 107 ರ ಆರ್.ಟಿ.ಸಿ ಯನ್ನು ನನ್ನ ವಿಚಾರಣಾ ಕಾಲಕ್ಕೆ ಹಾಜರುಪಡಿಸಿದ್ದೇನೆ. ಅದರ ವಿಸ್ತೀರ್ಣ 4 ಎಕರೆ 8 ಗುಂಟೆ. ಹೊನ್ನಮ್ಮ ನನ್ನ ತಾಯಿ. ನನ್ನ ತಾಯಿ ಹೆಸರಿಗೆ 1 ಎಕರೆ 30 ಗುಂಟೆ ಜಮೀನು ಇದೆ. ನಿಡಿ6 ರಲ್ಲಿ ನನ್ನ ತಾಯಿ ಹೆಸರಿಗೆ 2 ಎಕರೆ 38 ಗುಂಟೆ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ, ಕುಳ್ಳಯ್ಯನ ಗೋಪಯ್ಯ ಮತ್ತು ನಾಗಪ್ಪ ರವರ ನಡುವೆ ವಿಭಾಗವಾಗಿರುತ್ತದೆ. ದಿಃ 04.10.1992 ರಲ್ಲಿ ವಿಭಾಗ ಪತ್ರ ಆಗಿರುವುದು ಗೊತ್ತಿಲ್ಲ ಆದರೆ ನಾನು ನೋಂದಣಿ ಕಛೇರಿಗೆ ಹೋಗಿ ಸಹಿ ಮಾಡಿರುತ್ತೇನೆ. ಸದರಿ ವಿಭಾಗದಂತೆ ನನಗೆ 1 ಎಕರೆ 18 ಗುಂಟೆ ಮತ್ತು ಒಂದನೇ ಪ್ರತಿವಾದಿಗೆ 1 ಎಕರೆ 20 ಗುಂಟೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಮತ್ತು ಒಂದನೇ ಪ್ರತಿವಾದಿ ನಡುವೆ ಆದ ವಿಭಾಗ ಪತ್ರವನ್ನು ನೋಡಿಲ್ಲ. ಒಂದನೇ ಪ್ರತಿವಾದಿ ಮತ್ತು ನಾನು ಒಂದನೇ ವಾದಿಯ ವಿರುದ್ಧ ದಾವೆ ಹೂಡಿದ್ದೇವು ಎಂದರೆ ಇರಬಹುದು. ಸದರಿ ದಾವೆಯಲ್ಲಿ ನಾನು 1 ಎಕರೆ 18 ಗುಂಟೆಗೆ ಮತ್ತು ಒಂದನೇ ಪ್ರತಿವಾದಿ 1 ಎಕರೆ 20 ಗುಂಟೆಗೆ ಹಕ್ಕುಳ್ಳವರು ಎಂದು ತೀರ್ಪು ಆಗಿದೆ ಎಂದರೆ ಇರಬಹುದು.

ವಾದಿಗೆ 1 ಎಕರೆ 8 ಗುಂಟೆ ವಿಭಾಗದ ಹಕ್ಕು ಇರುವ ಬಗ್ಗೆ ನಾನು ಯಾವುದೆ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. ಸರ್ವೇ ನಂಃ 137 ರ ಒಟ್ಟು ವಿಸ್ತೀರ್ಣ ಗೊತ್ತಿಲ್ಲ. ಸದರಿ ಸರ್ವೇ ನಂಬರ್ ಯಾರ ಹೆಸರಿಗೆ ವಿಭಾಗವಾಗಿದೆ ಮತ್ತು ಯಾರ ಹೆಸರಿಗೆ ಖಾತಾ ನಮೂದಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ವಿಭಾಗದ 1 ಎಕರೆ 18 ಗುಂಟೆ ಜಮೀನಿಗೆ ಚೆಕ್ಕುಬಂದಿ ಹೇಳಲಾಗುವುದಿಲ್ಲ. ಒಂದನೇ ಪ್ರತಿವಾದಿಯ 1 ಎಕರೆ 20 ಗುಂಟೆ ಜಮೀನಿಗೆ ಚೆಕ್ಕುಬಂದಿ ಹೇಳಲಾಗುವುದಿಲ್ಲ. ವಾದಿಯ 1 ಎಕರೆ 8 ಗುಂಟೆ ಜಮೀನಿಗೆ ಚೆಕ್ಕುಬಂದಿ ಹೇಳಲಾಗುವುದಿಲ್ಲ. ಗೋಪಾಲಯ್ಯ ಮತ್ತು ಆತನ ಕುಟುಂಬದವರಿಗೆ ಸರ್ವೇ ನಂಃ 137 ರಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ ಮತ್ತು ಒಂದನೇ ಪ್ರತಿವಾದಿ ನಡುವೆ ಮನಸ್ತಾಪ ಇರುವ ಕಾರಣ ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ